ಕರ್ನಾಟಕ ಸರ್ಕಾರ

Government Of Karnataka

# ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ, ಗದಗ

# Karnataka State Rural Development and Panchayat Raj University, Gadag

ರೈತ ಭವನ, ಜನರಲ್ ಕಾರ್ಯಪ್ಪ ವೃತ್ತ, ಗದಗ– 582 101

Raith Bhavan Building, Genral Carippa Circle, Gadag – 582 101

email: registrarksrdpru@gmail.com Office Phone: 08372-230338, Fax:08372-297343

ಕ್ರಮ ಸಂಖ್ಯೆ : ಕರಾಗ್ರಾಅಪಂರಾವಿವಿ/ಅತಿನೇ/2018–19 ದಿನಾಂಕ: 10–07–2018

## ಪತ್ರಿಕಾ ಪ್ರಕಟಣೆ

**ವಿಷಯ: ಪೂರ್ಣಕಾಲಿಕ/ ಅರೆಕಾಲಿಕ ಅತಿಥಿ ಉಪನ್ಯಾಸಕರು ಮತ್ತು ಇತರೆ ತಾತ್ಕಾಲಿಕ ಅಧ್ಯಾಪಕರ ನೇಮಕಾತಿ ಕುರಿತು.**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ, 2018–19ನೇ ಸಾಲಿನ ಎಂ.ಎ ಸಾರ್ವಜನಿಕ ನೀತಿ ಮತ್ತು ಆಡಳಿತ/ ನವೀಕರಿಸಬಹುದಾದ ಇಂಧನ/ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ/ ಕಂಪ್ಯೂಟರ್ ಸೈನ್ಸ (ಡಾಟಾ ಅನಲೆಟಿಕ್ಸ) / ಜಿಯೋಇನ್ಫರ್ ಮೆಟಿಕ್ಸ/ ಅರ್ಥಶಾಸ್ತ್ರ (ಅಭಿವೃದ್ಧಿ ಅರ್ಥಶಾಸ್ತ್ರ)/ ಸಾರ್ವಜನಿಕ ಆರೋಗ್ಯ / ಎಂ.ಎಸ್.ಡಬ್ಲ್ಯೂ/ ವಾಣಿಜ್ಯ (ಉದ್ಯಮ ಶೀಲತೆ)/ (ಗ್ರಾಮೀಣ ನಿರ್ವಹಣೆ/ಸಹಕಾರ ನಿರ್ವಹಣೆ) ಸ್ನಾತಕೋತ್ತರ ಕೋರ್ಸುಗಳನ್ನು ಬೋಧಿಸಲು ಪೂರ್ಣಕಾಲಿಕ/ಅರೆಕಾಲಿಕ ಅತಿಥಿ ಉಪನ್ಯಾಸಕರನ್ನು/ ಸಂಶೋಧನಾ/ಪ್ರಾಜೆಕ್ಟ್ ಫೆಲೋ ತಾತ್ಕಾಲಿಕವಾಗಿ ನೇಮಕ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಸ್ವ–ವಿವರ ಮತ್ತು ಅಗತ್ಯ ದಾಖಲೆಗಳೊಂದಿಗೆ ಅರ್ಜಿಗಳನ್ನು **ಕುಲಸಚಿವರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ರೈತಭವನ, ಗದಗ–582101,** ಇವರಿಗೆ ದಿನಾಂಕ **26–07–2018** ರೊಳಗೆ ತಲುಪುವಂತೆ ಕಳುಹಿಸಬೇಕು. ಅರ್ಹ ಅಭ್ಯರ್ಥಿಗಳಿಗೆ, ವಿಶ್ವವಿದ್ಯಾಲಯದ ಕಛೇರಿ, ಗದಗ ದಲ್ಲಿ ಸಂದರ್ಶನ ನಡೆಸಲಾಗುವುದು. ಸಂದರ್ಶನದ ದಿನಾಂಕವನ್ನು ಇ–ಮೇಲ್/ವಾಟ್ಸಪ್/ಎಸ್.ಎಮ್.ಎಸ್./ಫೋನ್/ ವಿಶ್ವವಿದ್ಯಾಲಯದ ವೆಬ್ ಸೈಟ ನಲ್ಲಿ ತಿಳಿಸಲಾಗುವುದು. ಅತಿಥಿ ಉಪನ್ಯಾಸಕರ/ಸಂಶೋಧನಾ ಸಹಾಯಕರ ಸೇವೆಯನ್ನು ಪಡೆಯುವ ಅಥವಾ ಪಡೆಯದೇ ಇರುವ ಕುರಿತಾದ ಅಧಿಕಾರ ವಿಶ್ವವಿದ್ಯಾಲಯಕ್ಕಿರುತ್ತದೆ. ಸಂದರ್ಶನಕ್ಕೆ ಹಾಜರಾಗುವವರಿಗೆ ಯಾವುದೇ ಭತ್ಯೆಯನ್ನು ನೀಡಲಾಗುವುದಿಲ್ಲ. ವಿದ್ಯಾರ್ಹತೆಯ ವಿವರಗಳಿಗೆ ಮತ್ತು ಸಂದರ್ಶನದ ದಿನಾಂಕಗಳಿಗೆ ವಿಶ್ವವಿದ್ಯಾಲಯದ ಅಂತರ್ಜಾಲವನ್ನು www.ksrdpru.in ನೋಡಬಹುದು.

ಬೇರೆ ವಿಶ್ವವಿದ್ಯಾಲಯಗಳಲ್ಲಿ/ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಅಧ್ಯಾಪಕರು ನಿಯೋಜನೆ ಮೇಲೆ ಬರಲು ಸಹ ಅರ್ಜಿ ಸಲ್ಲಿಸಬಹುದು. ಗೌರವ/ಎಮಿರಿಟಸ್ ಪ್ರೊಫೆಸರ್/ಸಂದರ್ಶಕ ಶಿಕ್ಷಕರಾಗಿ ಕಾರ್ಯನಿರ್ವಹಿಸಲು ಇಚ್ಛಿಸುವವರು ಸಹಾ ಅರ್ಜಿ ಸಲ್ಲಿಸಬಹುದು.

**ಗೌರವಧನ:** ಪೂರ್ಣಕಾಲಿಕ ಅತಿಥಿ ಉಪನ್ಯಾಸಕರಿಗೆ ಯು.ಜಿ.ಸಿ. ನಿಯಮಗಳನ್ವಯ ಕಾರ್ಯಗಳಿಗೆ ಕ್ರೋಢಿಕೃತವಾಗಿ ತಿಂಗಳಿಗೆ ರೂ.35,000/– (ಮೂವತ್ತೈದು ಸಾವಿರಗಳು ಮಾತ್ರ) ನೀಡಲಾಗುವುದು ಮತ್ತು ಅರೆಕಾಲಿಕ ಅತಿಥಿ ಉಪನ್ಯಾಸಕರಿಗೆ ಪ್ರತಿ ಘಂಟೆಯ ಮಾದರಿಯಲ್ಲಿ ಪಾವತಿಸಲಾಗುವುದು. ಪೂರ್ಣಕಾಲಿಕ ಸಂಶೋಧನಾ ಸಹಾಯಕರಿಗೆ ತಿಂಗಳಿಗೆ ರೂ.30,000/– (ಮೂವತ್ತು ಸಾವಿರಗಳು ಮಾತ್ರ) ನೀಡಲಾಗುವುದು. ಗೌರವ/ಎಮಿರಿಟಸ್ ಪ್ರೊಫೆಸರ್/ಸಂದರ್ಶಕ ಶಿಕ್ಷಕರಿಗೆ ವಿಶ್ವವಿದ್ಯಾಲಯದ/ ಯು.ಜಿ.ಸಿ. ನಿಯಮಗಳನುಸಾರ ಸಂಭಾವನೆಯನ್ನು ಪಾವತಿಸಲಾಗುವುದು.

ಕೋರ್ಸುಗಳ ವಿವರ :

| ಅ.ನಂ | ಕೋರ್ಸ | ವಿದ್ಯಾರ್ಹತೆ |
|---|---|---|
| 1 | ಎಂ.ಎ ಸಾರ್ವಜನಿಕ ನೀತಿ ಮತ್ತು ಆಡಳಿತ | ಅಭ್ಯರ್ಥಿಗಳು ಸಾರ್ವಜನಿಕ ನೀತಿ ಮತ್ತು ಆಡಳಿತ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದು ಕನಿಷ್ಠ ಶೇ.55 ಅಂಕಗಳನ್ನು ಪಡೆದಿರಬೇಕು ಮತ್ತು ಸಂಬಂದಪಟ್ಟ ವಿಷಯದಲ್ಲಿ ಪಿ.ಎಚ್‌ಡಿ ಹೊಂದಿರಬೇಕು ಮತ್ತು ಅಥವಾ NET / SLET / KSET ಅರ್ಹತೆ ಪಡೆದಿರಬೇಕು. |
| 2 | ಎಂ.ಎಸ್ಸಿ ನವೀಕರಿಸಬಹುದಾದ ಇಂಧನ/ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ/ ಕಂಪ್ಯೂಟರ್ ಸೈನ್ಸ (ಡಾಟಾ ಅನಲೆಟಿಕ್ಸ) / ಜಿಯೋಇನ್ಫರ್ ಮೆಟಿಕ್ಸ | ಅಭ್ಯರ್ಥಿಗಳು ಎಂ.ಎಸ್ಸಿ ನವೀಕರಿಸಬಹುದಾದ ಇಂಧನ/ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ/ ಕಂಪ್ಯೂಟರ್ ಸೈನ್ಸ (ಡಾಟಾ ಅನಲೆಟಿಕ್ಸ) / ಜಿಯೋಇನ್ಫರ್ ಮೆಟಿಕ್ಸ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದು (M.Sc./M.Tech) ಕನಿಷ್ಠ ಶೇ.55 ಅಂಕಗಳನ್ನು ಪಡೆದಿರಬೇಕು ಮತ್ತು ಸಂಬಂದಪಟ್ಟ ವಿಷಯದಲ್ಲಿ ಪಿ.ಎಚ್‌ಡಿ ಹೊಂದಿರಬೇಕು ಮತ್ತು ಅಥವಾ NET / SLET / KSET ಅರ್ಹತೆ ಪಡೆದಿರಬೇಕು. |

| | | |
|---|---|---|
| 3 | ಎಂ.ಎಸ್ಸಿ ಅರ್ಥಶಾಸ್ತ್ರ (ಅಭಿವೃದ್ಧಿ ಅರ್ಥಶಾಸ್ತ್ರ) | ಅಭ್ಯರ್ಥಿಗಳು ಸದರಿ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದು ಕನಿಷ್ಠ ಶೇ.55 ಅಂಕಗಳನ್ನು ಪಡೆದಿರಬೇಕು ಮತ್ತು ಸಂಬಂದಪಟ್ಟ ವಿಷಯದಲ್ಲಿ ಪಿ.ಎಚ್‌ಡಿ ಹೊಂದಿರಬೇಕು ಮತ್ತು ಅಥವಾ NET / SLET / KSET ಅರ್ಹತೆ ಪಡೆದಿರಬೇಕು. |
| 4 | ಎಂ.ಪಿ.ಎಚ್ (ಸಾರ್ವಜನಿಕ ಆರೋಗ್ಯ) / ಎಂ.ಎಸ್.ಡಬ್ಲ್ಯೂ/ಎಂಕಾಂ (ಉದ್ಯಮ ಶೀಲತೆ) ಎಂ.ಬಿ.ಎ (ಗ್ರಾಮೀಣ ನಿರ್ವಹಣೆ/ಸಹಕಾರ ನಿರ್ವಹಣೆ) | ಅಭ್ಯರ್ಥಿಗಳು ಸಾರ್ವಜನಿಕ ಆರೋಗ್ಯ, ಸೋಷಿಯಲ್ ವರ್ಕ್ಸ್, ವಾಣಿಜ್ಯ (ಉದ್ಯಮ ಶೀಲತೆ)/ ವ್ಯವಹಾರ ಆಡಳಿತ (ಗ್ರಾಮೀಣ ನಿರ್ವಹಣೆ/ಸಹಕಾರ ನಿರ್ವಹಣೆ) ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದು ಕನಿಷ್ಠ ಶೇ.55 ಅಂಕಗಳನ್ನು ಪಡೆದಿರಬೇಕು ಮತ್ತು ಸಂಬಂದಪಟ್ಟ ವಿಷಯದಲ್ಲಿ ಪಿ.ಎಚ್‌ಡಿ ಹೊಂದಿರಬೇಕು ಮತ್ತು ಅಥವಾ NET / SLET / KSET ಅರ್ಹತೆ ಪಡೆದಿರಬೇಕು. |

**ವಿ.ಸೂ:** ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ದೈಹಿಕವಾಗಿ ಮತ್ತು ದೃಷ್ಟಿವಿಭಿನ್ನರಿಗೆ ಸಂಬಂದಪಟ್ಟ ಸ್ನಾತಕೋತ್ತರ ವಿಷಯದಲ್ಲಿ ಕನಿಷ್ಠ ಶೇ.50 ಅಂಕಗಳು. ಪಿಹೆಚ್‌ಡಿ/ಎನ್‌ಇಟಿ/ಎಸ್‌ಎಲ್‌ಇಟಿ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಇತರೆ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು. ಸದರಿ ವಿಷಯದಲ್ಲಿ ಸೂಕ್ತ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಇತರೆ ಸಂಬಂದಪಟ್ಟ ವಿಷಯಗಳ ಅಭ್ಯರ್ಥಿಗಳನ್ನು ಪರಿಗಣಿಸಬಹುದಾಗಿದೆ.

ಕುಲಸಚಿವರು

ಸಂಪಾದಕರು –

ಮೇಲಿನ ಪ್ರಕಟಣೆಯನ್ನು ತಮ್ಮ ದಿನಪತ್ರಿಕೆಯಲ್ಲಿ ಸುದ್ದಿಯನ್ನಾಗಿ ಪ್ರಕಟಿಸಬೇಕೆಂದು ಕೋರಲಾಗಿದೆ.